22)	ಕುಟ್ಟ	5	-	8
23)	ದೇವಪುರ	5	3	2
24)	ಸಿದ್ದಾಪುರ	7	7	3
25)	ಬಿಟ್ಟಂಗಾಲ	4	5	-
26)	ಕದನೂರು	3	11	-
	ಒಟ್ಟು	130	192	84

ಇ) ಹೌದು.

ಈ) ಈ ಯೋಜನೆಯಡಿ ಪ್ರಯೋಜನ ಪಡೆದ ಫಲಾನುಭವಿಗಳ ಪೈಕಿ ಬಡತನ ರೇಖೆ ದಾಟಿರುವ ಬಗ್ಗೆ ಫಲಾನುಭವಿಗಳ ಸಂಖ್ಯೆಯನ್ನು ತಿಳಿದುಕೊಳ್ಳಲು ಮೌಲ್ಯಮಾಪನ ಕೈಗೊಂಡಿಲ್ಲವಾದರೂ ಯೋಜನೆಯ ಮುಖ್ಯ ಉದ್ದೇಶಗಳು ತಕ್ಕ ಮಟ್ಟಿಗೆ ಈಡೇರಿದೆ ಎಂದು ಜಿಲ್ಲಾ ಪರಿಷತ್ ವರದಿ ಮಾಡಿದೆ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ಚುನಾವಣೆ

2057 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) *ಈಗಿರುವ ಪಂಚಾಯತ್ ರಾಜ್ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ಕಾನೂನನ್ನು ಬದಲಾಯಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?*

ಆ) *ಹಾಗಿದ್ದಲ್ಲಿ, ಅದನ್ನು ಎಂದಿನಿಂದ ಜಾರಿಗೆ ತರಲಾಗುವುದು?*

ಇ) *1992ರ ಜನವರಿಯಲ್ಲಿ ಈಗಿರುವ ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿಗಳ ಅವಧಿ ಮುಗಿಯುವುದರಿಂದ ಚುನಾವಣೆಗಳನ್ನು ನಡೆಸಲಾಗುವುದೇ?*

ಈ) *ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?*

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಹೌದು.

ಆ) ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಕಾನೂನಿಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ಹರಿಜನ, ಗಿರಿಜನ ಹಾಗೂ ಬಡವರಿಗೆ ನೀಡಿರುವ ಜನತಾ ಮನೆಗಳ ಕುರಿತು

2362 - ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) *ಕೊಡಗು ಜಿಲ್ಲೆಯಲ್ಲಿ ಬಡವರು ಮತ್ತು ಹರಿಜನ ಗಿರಿಜನರಿಗಾಗಿ ಇದುವರೆಗೆ ಕೊಟ್ಟಿರುವ ಜನತಾ ಮನೆಗಳ ಸಂಖ್ಯೆ ಎಷ್ಟು?* (1988-89 89-90 90-91 *ವರ್ಷಗಳ ವಿವರವನ್ನೊದಗಿಸುವುದು)*

ಆ) *1990-91 ರ ಯೋಜನೆಯಲ್ಲಿ ನಿಗದಿಪಡಿಸಿರುವ ಗುರಿ ಎಷ್ಟು?*

ಇ) *1991-92ಕ್ಕೆ ಯೋಜಿಸಿರುವ ಗುರಿ ಎಷ್ಟು?*

ಈ) *ಜನತಾ ಮನೆ ಹೊಂದಿರುವವರಿಂದ ಸರ್ಕಾರಕ್ಕೆ ಬರಬೇಕಾಗಿರುವ ಒಟ್ಟು ಹಣವೆಷ್ಟು?*

ಉ) *ಆ ರೀತಿ ಬರಬೇಕಾಗಿರುವ ಹಣವನ್ನು ಸರ್ಕಾರ ಮನ್ನಾ ಮಾಡುವ ಆಲೋಚನೆ ಏನಾದರೂ ಇದೆಯೇ?* (ತಾಲ್ಲೂಕುವಾರು ಮಾಹಿತಿಯನ್ನು